ಹೆಂಗರ ಮಾಡಿ ಹೆಟ್ಟಬೇಕು,
ಹಿಂತಾ ಪದಾ ಕಟ್ಟಬೇಕು—ಅಂತನಸತ್ತೈತಿ.

ಅಂದ್ರ, ಭಾಷೆಯನ್ನ ಒಂದು ಖಡ್ಗ ಅನ್ನೂ ರೀತಿಯೊಳಗ ಬಳಸ್ಕೊಂಡು ಸಾಧ್ಯವಾದಷ್ಟು ಜನಗೋಳ್ಗೆ ಹೆಚ್ಚಿನ ತಿಳಿವಳಿಕೆಯನ್ನ, ಪರಿಜ್ಞಾನವನ್ನ ಉಂಟುಮಾಡಬೇಕು, ಅದರ ಮೂಲಕ ಬದಲಾವಣೆ ಬರಬೌದು ಅನತಕ್ಕಂಥಾ ಒಂದ್ ಆಸೆಯನ್ನ, ಕನಸನ್ನ ಇಟಗೊಂಡು, ಕಾವ್ಯವನ್ನ ಬರದದ್ದು ಉಂಟು.

ಆದ್ರ ನನಗನಸ್ಸೈತಿ, ಕಾವ್ಯ ಬರೇ ಕಾವ್ಯ ಆಗಿ, ನಾಟಕಾ ಬರೇ ನಾಟಕಾ ಆಗಿ ಅದು ಎಂದೂ ಖಡ್ಗ ಆಗೂದುಕ್ಕ ಸಾಧ್ಯ ಆಗೂದುಲ್ಲಾ. ಆ ದೃಷ್ಟಿಯಿಂದ ಈ ಎಲ್ಲಾ ಪರಿಕ್ರಮಗಳ ಹಿಂದ್ ನಾವು ನೋಡೂದಂತಂದ್ರ ಇವತ್ತಿನ ಈ ವರ್ತಮಾನದ; ಅಂದ್ರ, —ಈ ವರ್ತಮಾನಂತಂದ್ರ ಭೂತ—ಭವಿಷ್ಯದ ಒಂದು ಸಂಧಿಕಾಲ ಇದು – ಈ ಸಂಧಿಕಾಲದೊಳಗ ನಿಂತಗೊಂಡೂ, ವರ್ತಮಾನದ ಬಗ್ಗೆ ಬರೀತಾನೇ ನಾವು ಭೂತದ ಬಗ್ಗೆ, ನನ್ನ ಬಗ್ಗೆ, ನಿಮ್ಮ ಬಗ್ಗೆ, ನಮ್ಮೆಲ್ಲರ ಬಗ್ಗೆ ಬರಕೊಂತ ಹೋಗಬೌದು ಅಂತ ನನಗ ಅನಸ್ಸೈತಿ. ಆದ್ರೂ ಸೈತ, ಅಭಿವ್ಯಕ್ತಿಯ ಒಂದು ಕೊರತೆ, ನಾನು ಏನು ಹೇಳಿದ್ರೂ ಸೈತ, ನಾನು ಪೂರ್ಣ ಹೇಳಿಲ್ಲ ಅನತಕ್ಕಂಥಾ ಕೊರತೆ ಯಾವಾಗ್ಲೂ ಇದ್ದs ಇರತೈತಿ. ನನ್ನ ಮತ್ತೊಂದು ಕವನದೊಳಗ—

ನಾನು ಬಿತ್ತಿದ್ದೆಷ್ಟೋ, ಬೆಳೆದಿದ್ದೆಷ್ಟೋ,
ಬಾಯಿ ಬಡೀಲಿಕ್ಕೆಂದು ನನಗೆ ದಕ್ಕಿದ್ದೆಷ್ಟೋ,
ಸಿಕ್ಕ ಈ ಇಷ್ಟರಲ್ಲಿ ನಿನಗೆ ಸಿಕ್ಕಿದ್ದೆಷ್ಟೋ...

—ಅಂತ ಒಂದು ಕೊರಗನ್ನ ನಾನು ಇಟಗೊಂಡಿರ್ತೇನಿ. ಇಂಥಾ ಒಂದು ಕೊರಗೇನೈತೆಲ್ಲಾ, ಇದು ಬರಹಗಾರನಿಗೆ ಭಾಳ ಮುಖ್ಯ. ನಾ ಹೇಳೂದೆಲ್ಲಾ ಹೇಳಿಬಿಟ್ಟ್ಯಾ ಅಂತಂದ್ರ ಮುಂದಿನ ಕವನಾ ಬರಿಯೂದಕ್ಕ ನನಗ ಅವಕಾಶ ಇರೂದುಲ್ಲಾ. ಹೇಳತಕ್ಕಂಥಾ ಒಂದು ಅವಕಾಶವನ್ನ ಇಟಗೊಂಡs ನಾನು ಆ ಕೆಲ್ಸಾ ಮಾಡಬೇಕಕ್ಕೈತಿ. ಹಿಂಗಾಗಿ, ಯಾರಾದ್ರೂ ದಾರಿಯೊಳಗ ನನ್ನ ತರುಬಿ, ನೀವು ಯಾಕ ಬರೀತೀರಿ ಅಂತಂದ್ರ, ಬಹುಶಃ ಮೊಗಂ ಆಗಿ ಇಂಥಾ ಉತ್ರಾ ಕೊಡಬೌದು ಅಂತ ನನಗನಸ್ಸೈತಿ. ಅದs ಪ್ರಶ್ನೇನ ನೀವು ಬ್ಯಾರೇ ರೀತಿಯೊಳಗ— 'ನೀ ಯಾಕ ಬರೀತೀಪಾ? ಯಾಕರs ಬರೀತೀಪಾ?' ಅಂತ ನೀವು ಕೇಳಬೌದು; ನೀವು ಬರದಿರೋದು ಸಾಕು ಅನ್ನೋ ಅರ್ಥದೊಳಗ. ಆದ್ರ, ನನಗ ಇನ್ನೂ ಅಂಥಾ ಪ್ರಶ್ನೆ ಯಾರೂ ಕೇಳಿಲ್ಲ ಅಂತ ನನಗನಸ್ಸೈತಿ.

◆ **ಇನ್ನ ಈ ನಿಮ್ಮ ನಾಟಕಗೋಳು ಮತ್ತ ಅವುಗಳೊಳಗ ಬಳಕಿ ಆಗೂ ವ್ಯಂಗ್ಯದ ಬಗ್ಗೆ ಏನ್ ಹೇಳ್ತೀರಿ?**

ಕಾವ್ಯದ ಹಂಗs ನಾಟಕಾನೂ ಭಾಳ ಸಮರ್ಥ ಮಾಧ್ಯಮ ಅಂತ ನನಗನಸ್ಸೈತಿ. ಯಾಕಂದ್ರ, ನಾಟ್ಕದ ಮೂಲಕ ಇನ್ನೂ ಹೆಚ್ಚು ಸಂಕೀರ್ಣವಾಗಿ, ಆಳವಾಗಿ ಮತ್ತು ವಸ್ತುನಿಷ್ಠವಾಗಿ ನನ್ನ ಹುಡುಕಾಟವನ್ನ ನಡಸಬೌದು ಅನ್ನೂ ದೃಷ್ಟಿಯಿಂದ ನನ್ನ 'ಕೊಡೆಗಳು' ಆಗ್ಲಿ, 'ಅಪ್ಪ' ಆಗ್ಲಿ, 'ಕುಂಟಾ ಕುಂಟಾ ಕುರವತ್ತಿ', 'ಟಿಂಗರ್ ಬುಡ್ಡಣ್ಣ' ಮುಂತಾದ ನಾಟಕಗಳನ್ನ ನಾನು ಬರದ್ಯಾ. ಆಮ್ಯಾಲೆ ನನ್ನ ಶೈಲಿ ಸಾಮಾನ್ಯವಾಗಿ ವ್ಯಂಗ್ಯ ಶೈಲಿ ಅಂತ ಜನಾ ಹೇಳ್ತಿರ್ತಾರ. ಆದ್ರ, ಈ ವ್ಯಂಗ್ಯ ಅನ್ನೂದೇನೈತೆಲ್ಲಾ, ಇದನ್ನ ನಾನು ಮ್ಯಾಲಿನಿಂದ ಹೇರಿದಂಥಾ ಗುಣಾ ಅಲ್ಲ. ನಮ್ಮ ಮಾತಿನೊಳಗ, ನಮ್ಮ ಶಬ್ದದೊಳಗ, ನಮ್ಮ ವಾಕ್ಯರಚನೆಯೊಳಗ ಅಂತರ್ನಿಹಿತವಾಗಿರತಕ್ಕಂಥಾ ವ್ಯಂಗ್ಯವನ್ನ ನಾನು ಹಿಡಿಯೂದಕ್ಕ ಪ್ರಯತ್ನ ಮಾಡ್ತೇನಿ. ವ್ಯಂಗ್ಯದ ಮೂಲಕ ಏನು ಸಾಧಿಸಬೌದು ಅಂತಂದ್ರ, ಬರೀ